## ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಎಂವೈಎಸ್\2929\2016\ಉನಿವಿ-4

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 01/07/2019

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ**

**ವಿಷಯ:** ಸರ್ಕಾರಿ ನೌಕರರಾದ ಮೈಸೂರು ಜಿಲ್ಲೆ ಮೈಸೂರು ಅರಮನೆ ಮಂಡಳಿಯ ಉಪ ನಿರ್ದೇಶಕರಾದ ಶ್ರೀ.ಟಿ.ಎಸ್.ಸುಬ್ರಮಣ್ಯ ರವರ ದುರ್ನಡತೆಯ ಬಗ್ಗೆ.

**********

ಮೈಸೂರು ಜಿಲ್ಲೆ ರಾಮಕೃಷ್ಣ ನಗರ ಇ & ಎಫ್ ಬ್ಲಾಕ್ 7ನೇ ಕ್ರಾಸ್ 4ನೇ ಮುಖ್ಯ #905ರ ನಿವಾಸಿಯಾದ ಶ್ರೀ.ಎಂ.ಕೆ.ಯಶವಂತ ಕುಮಾರ್ (ಇನ್ನು ಮುಂದೆ, 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಮೈಸೂರು ಜಿಲ್ಲೆ ಮೈಸೂರು ಅರಮನೆ ಮಂಡಳಿಯ ಉಪ ನಿರ್ದೇಶಕರಂದ ಶ್ರೀ.ಟಿ.ಎಸ್.ಸುಬ್ರಮಣ್ಯ (ಇನ್ನು ಮುಂದೆ, 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧದ ದುರ್ನಡತೆ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 9ರಡಿ ತನಿಖೆಗೆ ತೆಗೆದುಕೊಂಡಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ಐತಿಹಾಸಿಕ ಪರಂಪರೆಯುಳ್ಳ ಮೈಸೂರು ಅರಮನೆಯಲ್ಲಿ ಒಳಾಂಗಣ ಮತ್ತು ಹೊರಾಂಗಣದಲ್ಲಿ ದಿನಾಂಕ:05/02/16 ಮತ್ತು 06/02/16 ರಂದು ಒಬ್ಬ ನಿವೃತ್ತ ಐಎಎಸ್ ಅಧಿಕಾರಿಯ ಪುತ್ರ ಮತ್ತು ಅವರ ಭಾವಿ ಪತ್ನಿ ರವರು ಕಾನೂನು ಉಲ್ಲಂಘಿಸಿ ವಿಡಿಯೋ ಚಿತ್ರೀಕರಣ ಮಾಡಿದ್ದು, ಎದುರುದಾರರು ಹಣದ ಆಮಿಷಕ್ಕೆ ಅಥವಾ ಪ್ರಭಾವಕ್ಕೊಳಗಾಗಿ ಮೇಲಾಧಿಕಾರಿಗಳ ಗಮನಕ್ಕೆ ತರದೇ ಸದರಿ ಚಿತ್ರೀಕರಣಕ್ಕೆ ಅನುಮತಿಯನ್ನು ನೀಡಿದ್ದಾರೆ. ಈ ಎಲ್ಲಾ ವಿಷಯಗಳಿಗೆ ಸಂಬಂಧಿಸಿದಂತೆ ಮೈಸೂರು ಜಿಲ್ಲಾಧಿಕಾರಿಗಳು ಮೈಸೂರು ನಗರ ಪೊಲೀಸ್ ಆಯುಕ್ತರ ತನಿಖಾ ವರದಿಯನ್ನು ತರಿಸಿಕೊಂಡು, ಅದರಲ್ಲಿ ಅರಮನೆಯ ಅಧಿಕಾರಿಗಳು, ಅರಮನೆ ಮಂಡಳಿ ಮತ್ತು ಕೆಲವು ನೌಕರರ ವಿರುದ್ಧ ಕರ್ತವ್ಯ ಲೋಪ ಕಂಡು ಬಂದಿರುವುದರಿಂದ, ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ವರದಿ ನೀಡಿದ್ದಾರೆ. ಸರ್ಕಾರದ ಮಟ್ಟದಲ್ಲಿ ಹಿರಿಯ ಅಧಿಕಾರಿಗಳ ಬೆಂಬಲ ಎದುರುದಾರರಿಗೆ ಇರುವುದರಿಂದ, ಸದರಿ ವರದಿಯನ್ವಯ ಎದುರುದಾರರ ವಿರುದ್ಧ ಯಾವುದೇ ಕ್ರಮ ಆಗಿಲ್ಲವೆಂದು ದೂರುದಾರರು ಹೇಳಿದ್ದಾರೆ.

3. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಸದರಿಯವರು ತಮ್ಮ ಆಕ್ಷೇಪಣೆಯಲ್ಲಿ –

ದಿನಾಂಕ:25/01/16ರಂದು ಮೈಸೂರು ಅರಮನೆಯಲ್ಲಿ ಶ್ರೀ.ಆದಿತ್ಯ ರವರು ನಡೆಸಿರುವ ಫೋಟೋ ಶೂಟ್ ದಿನದಂದು ತಾವು ಕರ್ತವ್ಯದ ಮೇಲೆ ಬೆಂಗಳೂರಿಗೆ ತೆರಳಿರುತ್ತೇನೆ. ಯಾರೊಬ್ಬರು ಅರಮನೆ ಪ್ರವೇಶಿಸುವ ಮುನ್ನ ಭದ್ರತಾ ದೃಷ್ಟಿಯಿಂದ ಅವರನ್ನು ಯಾವುದೇ ಮುಲಾಜಿಲ್ಲದೆ ಪರೀಕ್ಷಿಸಿ ಒಳ ಬಿಡುವುದು ಅರಮನೆ ಭದ್ರತಾ ಪಡೆಯವರದ್ದಾಗಿದೆ. ಫೋಟೋ ಶೂಟ್ ನಡೆದ ದಿನದಂದು ಅರಮನೆ ಮಂಡಳಿಯ ಅಂದಿನ ನಿರ್ದೇಶಕರಾದ ಶ್ರೀಮತಿ.ಬಿ.ಜಿ.ಇಂದಿರಮ್ಮ ರವರು ಕರ್ತವ್ಯದಲ್ಲಿದ್ದು, ಅವರೇ ಪ್ರಕರಣಕ್ಕೆ ಸಂಪೂರ್ಣ ಜವಾಬ್ದಾರರಾಗಿದ್ದಾರೆ. ಅರಮನೆಯಲ್ಲಿ ನಡೆದಿರುವ ಫೋಟೋ ಶೂಟ್ ಪ್ರಕರಣದ ಬಗ್ಗೆ ಈಗಾಗಲೇ ಪೋಲೀಸ್ ಆಯುಕ್ತರ ಕಛೇರಿಯಿಂದ ವಿಚಾರಣೆ ನಡೆದಿದೆ. ಫೋಟೋ ಶೂಟ್ ನಡೆದ ದಿನದಂದು ತಾವು ಮೈಸೂರಿನಲ್ಲಿ ಇಲ್ಲದಿರುವುದು ವಿಚಾರಣೆಯಿಂದ ಸಾಬೀತಾಗಿದೆ. ಫೋಟೋ ಶೂಟ್ ಪ್ರಕರಣವನ್ನು ಅರಮನೆ ಮಂಡಳಿಯ ಸಕ್ಷಮ ಅಧಿಕಾರಿಯವರ ಗಮನಕ್ಕೆ ತಂದಿದ್ದು, ಪ್ರಕರಣವನ್ನು ದುರುಪಯೋಗ ಪಡಿಸಿಕೊಳ್ಳಲು ಪ್ರಯತ್ನಿಸಿದ ಕಾರಣ, ಬೇರೆ ವಿದಿಯಿಲ್ಲದೆ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂ:37587/2016 ಅನ್ನು ದಾಖಲಿಸಿದೆ. ಫೋಟೋ ಶೂಟ್ ಪ್ರಕರಣವು ದಿ:05/02/16 ಮತ್ತು 06/02/16ರಂದು ನಡೆದಿರುವುದಾಗಿ ದೂರುದಾರರು ತಿಳಿಸಿದ್ದು, ಆರಕ್ಷಕ ಆಯುಕ್ತರ ಕಛೇರಿಯಿಂದ ನಡೆದ ತನಿಖೆಯಲ್ಲಿ ಶ್ರೀ.ಆದಿತ್ಯ ರವರು ಫೋಟೋ ಶೂಟ್ ನಡೆಸಿದ ಪ್ರಕರಣವು ದಿ:21/05/16ರಂದು ನಡೆದಿದೆ. ದೂರುದಾರರು ಸಲ್ಲಿಸಿದ ದೂರು ಸತ್ಯಕ್ಕೆ ದೂರವಾಗಿದ್ದು, ತಮ್ಮ ಗುಂಪಿನ ಸದಸ್ಯರನ್ನು ಮೆಚ್ಚಿಸಲು ಮತ್ತು ತಮ್ಮ ವಿರುದ್ಧ ಹಗೆ ಸಾಧಿಸಲು ಸುಳ್ಳು ದೂರನ್ನು ಸಲ್ಲಿಸಿದ್ದಾರೆಂದು ಹೇಳಿದ್ದಾರೆ.

4. ದೂರಿನ ಬಗ್ಗೆ ಜಿಲ್ಲಾಧಿಕಾರಿಗಳು, ಮೈಸೂರು ರವರಿಂದ ವರದಿಯನ್ನು ಕೇಳಲಾಗಿ, ಅಪರ ಜಿಲ್ಲಾಧಿಕಾರಿಗಳು, ಮೈಸೂರು (ಇನ್ನು ಮುಂದೆ, 'ತನಿಖಾಧಿಕಾರಿಗಳು' ಎಂದು ಕರೆಯಲ್ಪಡುತ್ತಾರೆ) ರವರು ತಮ್ಮ ತನಿಖಾ ವರದಿಯಲ್ಲಿ –

1) ದೂರಿಗೆ ಸಂಬಂಧಿಸಿದಂತೆ ವಿವರವಾದ ವರದಿಯನ್ನು ದಾಖಲೆಗಳೊಂದಿಗೆ ಸಲ್ಲಿಸಲು ಮೈಸೂರು ಅರಮನೆ ಮಂಡಳಿ ಉಪ ನಿರ್ದೇಶಕರಿಗೆ ಸೂಚಿಸಲಾಗಿ, ಸದರಿಯವರು ಈ ಕೆಳಕಂಡಂತೆ ವರದಿ ನೀಡಿದ್ದಾರೆ –

ದಿನಾಂಕ:19/06/03ರಂದು ನಡೆದ ಮೈಸೂರು ಅರಮನೆ ಮಂಡಳಿ ಸಭೆಯಲ್ಲಿ ಅರಮನೆಯೊಳಗಡೆ ಛಾಯಾಚಿತ್ರವನ್ನು ತೆಗೆಯಲು ಇರುವ ನಿಷೇಧವನ್ನು ಸಡಿಲಗೊಳಿಸಿ, ಅರಮನೆ ಒಳಭಾಗದಲ್ಲಿ ಫ್ಲ್ಯಾಶ್ ಲೈಟ್ ಇಲ್ಲದ ಛಾಯಾಚಿತ್ರವನ್ನು ತೆಗೆಯಲು ಕ್ಯಾಮೆರಾ ಶುಲ್ಕ ₹20/–ರಂತೆ ವಸೂಲಿ ಮಾಡಿ, ಅರಮನೆ ವೀಕ್ಷಕರಿಗೆ ನೀಡುವುದಾಗಿ ತಿಳಿಸುತ್ತಾ, ಸದರಿ

M45/2929/16



ಫೋಟೋಶೂಟ್ ಪ್ರಕರಣ ನಡೆದ ದಿನದಂದು ಕಛೇರಿ ಕೆಲಸದ ನಿಮಿತ್ತ ತಾವು ನ್ಯಾಯಾಲಯದ ಪ್ರಕರಣವೊಂದಕ್ಕೆ ಬೆಂಗಳೂರಿಗೆ ತೆರಳಿದ್ದು, ಸದರಿ ದಿನದಂದು ಮಂಡಳಿಯ ನಿರ್ದೇಶಕರು ಕರ್ತವ್ಯ ನಿರ್ವಹಿಸಿದ್ದಾರೆ. ತಾವು ಬೆಂಗಳೂರಿಗೆ ತೆರಳಿರುವುದಕ್ಕೆ ತಮ್ಮ ಮೊಬೈಲ್‌ನ ಟ್ರ್ಯಾಕ್ ರೆಕಾರ್ಡ್ ಸಾಕ್ಷಿಯಾಗಿದ್ದು, ಅದರ ಪ್ರತಿಯನ್ನು ಈಗಾಗಲೇ ಲೋಕಾಯುಕ್ತಕ್ಕೆ ಸಲ್ಲಿಸಿರುವುದಾಗಿ ತಿಳಿಸಿದ್ದಾರೆ. ಈಗಾಗಲೇ, ದಿ:08/06/17ರಂದು ಅಂದಿನ ಮಂಡಳಿಯ ನಿರ್ದೇಶಕರು, ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ಬರೆದಿರುವ ಪತ್ರವನ್ನು ಕೂಲಂಕಷವಾಗಿ ಅವಗಾಹಿಸಿ, ನ್ಯಾಯಯುತವಾದ \ ಸಮಂಜಸವಾದ ಸ್ಪಷ್ಟ ಮಾಹಿತಿಯುಳ್ಳ ಪತ್ರವನ್ನು ಲೋಕಾಯುಕ್ತಕ್ಕೆ \ ಸರ್ಕಾರಕ್ಕೆ ಶೀಘ್ರವಾಗಿ ಸಲ್ಲಿಸಲು ಕೋರುವುದರೊಂದಿಗೆ ಸತ್ಯಕ್ಕೆ ದೂರವಾದ ದೂರನ್ನು ಮುಕ್ತಾಯಗೊಳಿಸಿ ಸುಳ್ಳು ದೂರನ್ನು ದಾಖಲಿಸಿರುವ ದೂರುದಾರರ ವಿರುದ್ಧ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 20ರಂತೆ ಕ್ರಮ ವಹಿಸಲು ಕೋರಿದ್ದಾರೆ;

2) ಉಪ ಪೊಲೀಸ್ ಆಯುಕ್ತರು (ಕಾನೂನು & ಸುವ್ಯವಸ್ಥೆ), ಮೈಸೂರು ನಗರ ರವರ ದಿನಾಂಕ:04/01/18ರ ಪತ್ರದಲ್ಲಿ ಪೊಲೀಸ್ ಆಯುಕ್ತರು ದಿ:28/07/16ಕ್ಕೆ ಜಿಲ್ಲಾಧಿಕಾರಿಗಳು, ಮೈಸೂರು ರವರಿಗೆ ಅರಮನೆ ಫೋಟೋ ಶೂಟ್ ಮತ್ತು ಚಿತ್ರೀಕರಣ ಸಂಬಂಧವಾಗಿ ವಿಚಾರಣಾ ವರದಿಯನ್ನು ಕಳುಹಿಸಿದ್ದಾರೆ;

3) ಡಾ||ಹೆಚ್.ಟಿ.ಶೇಖರ್, ಉಪ ಪೊಲೀಸ್ ಆಯುಕ್ತರು (ಕಾನೂನು & ಸುವ್ಯವಸ್ಥೆ), ಮೈಸೂರು ನಗರ ರವರ ವರದಿಯಲ್ಲಿ, ಮೈಸೂರು ಅರಮನೆಯಲ್ಲಿ ನಡೆಸಲಾಗಿರುವ ಫೋಟೋ ಶೂಟ್ ಮತ್ತು ಚಿತ್ರೀಕರಣ ಸಂಬಂಧವಾಗಿ ಅರಮನೆ ಮಂಡಳಿ ಹಾಗೂ ಅರಮನೆ ಭದ್ರತಾ ಪಡೆಯ ಸಿಬ್ಬಂದಿಗಳು ಕರ್ತವ್ಯ ಲೋಪ ಎಸಗಿರುವುದು ದೃಢಪಟ್ಟಿರುವುದಾಗಿ ಹಾಗೂ ಕರ್ತವ್ಯ ಲೋಪ ಎಸಗಿರುವ ಅರಮನೆ ಮಂಡಳಿಯ ನಿರ್ದೇಶಕರಾದ ಶ್ರೀಮತಿ.ಬಿ.ಜಿ.ಇಂದಿರಮ್ಮ, ಉಪ ನಿರ್ದೇಶಕರಾದ ಶ್ರೀ.ಟಿ.ಎಸ್.ಸುಬ್ರಮಣ್ಯ (ಎದುರುದಾರರು), ಕ್ಯೂರೇಟರ್ ಶ್ರೀಮತಿ.ಸಬೀಹಾ ಬೇಗಂ ಹಾಗೂ ಇಬ್ಬರು ಹೊರ ಗುತ್ತಿಗೆ ಗ್ರೂಪ್–ಡಿ ನೌಕರರ ವಿರುದ್ಧ ಸೂಕ್ತ ಶಿಸ್ತಿನ ಕ್ರಮ ಜರುಗಿಸುವಂತೆ ಕೋರಿದ್ದಾರೆ. ಪ್ರಕರಣಕ್ಕೆ ಸಂಬಂಧಪಟ್ಟಂತೆ ಅರಮನೆ ಭದ್ರತಾ ಪಡೆಯಲ್ಲಿ ಕರ್ತವ್ಯ ಲೋಪ ಎಸಗಿರುವ ಎಹೆಚ್‌ಸಿ–179 ಶ್ರೀ.ನಿಂಗಪ್ಪ ಮತ್ತು ಎಪಿಸಿ–515 ಶ್ರೀ.ಚತುರೇಂದ್ರ ರಾಜು ರವರ ಮೇಲೆ ಇಲಾಖಾ ವಿಚಾರಣೆ ನಡೆಸಿ, ಸೂಕ್ತ ಶಿಸ್ತಿನ ಕ್ರಮ ವಹಿಸಲಾಗುವುದೆಂದು ಹೇಳಿದ್ದಾರೆ. ಮುಂದುವರೆದು, ಅರಮನೆ ಮಂಡಳಿಯ ಹಿಂದಿನ ನಿರ್ದೇಶಕರು ಹಾಗೂ ಅಪರ ಜಿಲ್ಲಾಧಿಕಾರಿಗಳು, ಮೈಸೂರು ರವರು ದಿ:08/06/17ರಂದು ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ ಫೋಟೋ ಶೂಟ್ ಮಾಡಲು ನಿರ್ಬಂಧ ಇಲ್ಲದಿರುವುದರಿಂದ ಹಾಗೂ ಫೋಟೋ ಶೂಟ್ ನಡೆದ ದಿನ ಉಪ ನಿರ್ದೇಶಕರು ಕಾರ್ಯನಿಮಿತ್ತ ಬೆಂಗಳೂರಿಗೆ ತೆರಳಿದ್ದು ದೃಢಪಟ್ಟಿರುವುದರಿಂದ ಅರಮನೆ ಮಂಡಳಿಯ ಉಪನಿರ್ದೇಶಕರು ಅವರ ಅಧಿಕಾರ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸಿರುವುದಾಗಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿರುವುದಾಗಿ ಹೇಳಿದ್ದಾರೆ.

5. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) ಮೈಸೂರು ಅರಮನೆಯಲ್ಲಿ ಒಬ್ಬ ನಿವೃತ್ತ ಐ.ಎ.ಎಸ್. ಅಧಿಕಾರಿಯವರ ಪುತ್ರ ಮತ್ತು ಅವರ ಭಾವಿ ಪತ್ನಿಯವರು ದಿನಾಂಕ:05/02/2016 ಮತ್ತು 06/02/2016 ರಂದು ಕಾನೂನು ಉಲ್ಲಂಘಿಸಿ, ಒಳಾಂಗಣ ಮತ್ತು ಹೊರಾಂಗಣ ಚಿತ್ರೀಕರಣ ಮಾಡಿದ್ದಾರೆಂದು ದೂರುದಾರರು ಆಪಾದಿಸಿದ್ದು, ಸದರಿ ಚಿತ್ರೀಕರಣ (ಫೋಟೋ ಶೂಟ್) ದಿನಾಂಕ:25.1.2016 ರಂದು ಆಗಿದೆ ಮತ್ತು ಆ ದಿನ ತಾವು ಕರ್ತವ್ಯದ ಮೇಲೆ ಬೆಂಗಳೂರಿಗೆ ತೆರಳಿದ್ದಾಗಿ ಎದುರುದಾರರು ಪ್ರತಿಪಾದಿಸಿದ್ದಾರೆ;

2) ಮೈಸೂರು ನಗರ ಪೊಲೀಸ್ ಆಯುಕ್ತರು ಮೈಸೂರು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದ ದಿ:28/07/16ರ ವಿಚಾರಣಾ ವರದಿಯಲ್ಲಿ ಈ ಕೆಳಗಿನಂತೆ ಹೇಳಿದೆ –

" ರವರಿಗೆ,
ಮಾನ್ಯ ಮೈಸೂರು ಜಿಲ್ಲಾಧಿಕಾರಿಗಳು,
ಮೈಸೂರು ಜಿಲ್ಲೆ,
ಮೈಸೂರು.

ವಿಷಯ:– ಮೈಸೂರು ಅರಮನೆ ಒಳ ಆವರಣದಲ್ಲಿ ಫೋಟೋ ಶೂಟ್ ಮತ್ತು ಚಿತ್ರೀಕರಣ ನಡೆಸಿರುವ ಕುರಿತಾದ ವಿಚಾರಣಾ ವರದಿ.

ಉಲ್ಲೇಖ:– 1) ಜಿಲ್ಲಾಧಿಕಾರಿಗಳ ಕಛೇರಿ ಪತ್ರ ಸಂ:ಎಂಎಜಿ(4)\ಅರಮನೆ\04\2016–17 ದಿನಾಂಕ:26/05/2016.

2) ಡಿಸಿಪಿ, ಕಾ&ಸು ರವರ ವಿಚಾರಣಾ ವರದಿ ಸಂ:ಡಿಸಿಪಿ(ಕಾ&ಸು)\ಸಿಬಿ\95\2016 ದಿನಾಂಕ:28/07/2016.

*******

ದಿನಾಂಕ:26/05/16ರಂದು ಮೈಸೂರು ಅರಮನೆ ಆವರಣದಲ್ಲಿ ಫೋಟೋ ಶೂಟ್ ಮತ್ತು ಚಿತ್ರೀಕರಣ ನಡೆಸಿರುವ ಬಗ್ಗೆ ಟಿವಿ–9 ಮತ್ತು ಇನ್ನಿತರೆ ಸುದ್ದಿ ವಾಹಿನಿ \ ಮಾಧ್ಯಮಗಳಲ್ಲಿ ವರದಿ ಪ್ರಸಾರವಾಗಿರುವ ಹಿನ್ನೆಲೆಯಲ್ಲಿ ಮೈಸೂರು ಅರಮನೆಯ ಆವರಣ ಒಳಾವರಣದಲ್ಲಿ ಯಾವುದೇ ರೀತಿಯ ಫೋಟೋಶೂಟ್ ಮತ್ತು ಚಿತ್ರೀಕರಣ ನಡೆಸಬೇಕಾದಲ್ಲಿ, ಅರಮನೆ ಮಂಡಳಿಯ ಅನುಮತಿಯನ್ನು ಪಡೆಯ ಬೇಕಾಗಿರುತ್ತದೆ. ಆದರೆ, ದೃಶ್ಯ ಮಾಧ್ಯಮಗಳಲ್ಲಿ ಬಂದಂತಹ ವರದಿಗಳಲ್ಲಿ ಬಂದ ದೃಶ್ಯಾವಳಿಗಳಿಗೆ ಸಂಬಂಧಿಸಿದಂತೆ, ಅರಮನೆ ಮಂಡಳಿಯಿಂದ ಯಾವುದೇ ಅನುಮತಿಯನ್ನು ನೀಡಲಾಗಿರುವುದಿಲ್ಲ. ಅರಮನೆಯ ಒಳಾವರಣದಲ್ಲಿ ಸಿಸಿ ಟಿವಿ ಕ್ಯಾಮೆರಾಗಳನ್ನು ಅಳವಡಿಸಿದ್ದು, ಇಂಥಹ ಕ್ರಮಗಳಿಗೆ ಅವಕಾಶ ನೀಡಿರುವುದು ಕಾನೂನುಬಾಹಿರವಾಗಿದ್ದು, ಈ ಹಿನ್ನೆಲೆಯಲ್ಲಿ ಅರಮನೆಯ ಒಳಾವರಣದಲ್ಲಿ ಅಳವಡಿಸಲಾಗಿರುವ ಸಿಸಿ ಟಿವಿ

MYS/2929/16



ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯಾವಳಿಗಳಿರುವ ದಾಖಲೆಗಳನ್ನು ಪಡೆದುಕೊಂಡು ಅರಮನೆಯ ಒಳಾವರಣದಲ್ಲಿ ಕೈಗೊಳ್ಳಲಾಗಿರುವ ಮೇಲ್ಕಂಡ ಫೋಟೋಶೂಟ್ ಮತ್ತು ಚಿತ್ರೀಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆಯನ್ನು ಕೈಗೊಂಡು ಇದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟ ಅಧಿಕಾರಿ ಮತ್ತು ಸಿಬ್ಬಂದಿಗಳ ಕುರಿತಂತೆ ಕಾನೂನು ಕ್ರಮ ಕೈಗೊಳ್ಳುವಂತೆ ಹಾಗೂ ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನವನ್ನು ನೀಡುವಂತೆ ಉಲ್ಲೇಖಿತ ಪತ್ರದಲ್ಲಿ ಸೂಚಿಸಲಾಗಿತ್ತು.

ಮೇಲ್ಕಂಡ ವಿಷಯದ ಕುರಿತಂತೆ ಡಾ॥ಹೆಚ್.ಟಿ.ಶೇಖರ್, ಉಪ ಪೊಲೀಸ್ ಆಯುಕ್ತರು ಕಾನೂನು ಮತ್ತು ಸುವ್ಯವಸ್ಥೆ ರವರಿಗೆ ಕೂಲಂಕುಷವಾಗಿ ವಿಚಾರಣೆಯನ್ನು ಕೈಗೊಂಡು ಸ್ಪಷ್ಟ ಅಭಿಪ್ರಾಯದೊಂದಿಗೆ ವಿಚಾರಣಾ ವರದಿಯನ್ನು ನೀಡುವಂತೆ ಸೂಚಿಸಲಾಗಿತ್ತು. ಅದರಂತೆ, ಸದರಿಯವರು ಅರಮನೆಯ ಒಳಾವರಣದಲ್ಲಿ ಕೈಗೊಳ್ಳಲಾಗಿರುವ ಫೋಟೋಶೂಟ್ ಮತ್ತು ಚಿತ್ರೀಕರಣದ ಸಂಬಂಧವಾಗಿ ಸಮಗ್ರವಾದ ವಿಚಾರಣೆಯನ್ನು ಕೈಗೊಂಡು ಉಲ್ಲೇಖ–2ರಂತೆ ವಿಚಾರಣಾ ವರದಿಯನ್ನು ಸಲ್ಲಿಸಿರುತ್ತಾರೆ.

ಅರಮನೆಯಲ್ಲಿ ನಡೆಸಲಾಗಿರುವ ಫೋಟೋಶೂಟ್ ಮತ್ತು ಚಿತ್ರೀಕರಣದ ಸಂಬಂಧವಾಗಿ ಕೈಗೊಳ್ಳಲಾದ ವಿಚಾರಣೆಯ ಸಂಬಂಧವಾಗಿ ವಿಚಾರಣಾ ಅಧಿಕಾರಿಯವರು ನೀಡಿರುವ ವರದಿಯಲ್ಲಿ ತಮ್ಮ ಅಂತಿಮ ಅಭಿಪ್ರಾಯವನ್ನು ಈ ಕೆಳಗಿನಂತೆ ನೀಡಿರುತ್ತಾರೆ.

> ಅರಮನೆ ಫೋಟೋ ಶೂಟ್‌ನಲ್ಲಿ ಭಾಗವಹಿಸಿದ್ದ, ಶ್ರೀ.ಬಿ.ಎನ್.ಆದಿತ್ಯ ಮತ್ತು ಶ್ರೀಮತಿ.ನವ್ಯತಾ ರವರನ್ನು ಅರಮನೆ ಮಂಡಳಿಯ ಉಪನಿರ್ದೇಶಕರಾದ ಶ್ರೀ.ಟಿ.ಎಸ್.ಸುಬ್ರಹ್ಮಣ್ಯರವರ ಆದೇಶದಂತೆ, ಅರಮನೆ ಕ್ಯೂರೇಟರ್ ಶ್ರೀಮತಿ.ಸಬೀಹ ಬೇಗಂ ಮತ್ತು ಶ್ರೀ.ಮೋಹನ್ ಹಾಗೂ ಶ್ರೀ.ಯುವರಾಜ್ ರವರ ಸಮಕ್ಷಮದಲ್ಲಿಯೇ ಅರಮನೆಯಲ್ಲಿ ಫೋಟೋ ಶೂಟ್ ನಡೆದಿದ್ದು, ಶ್ರೀಮತಿ.ಸಬೀಹ ಬೇಗಂ ಮತ್ತು ಶ್ರೀ.ಮೋಹನ್ ಹಾಗೂ ಶ್ರೀ.ಯುವರಾಜ್ ಎಂಬುವವರು ಚಿತ್ರೀಕರಣ ನಡೆದಿರುವ ಎಲ್ಲಾ ಕಡೆಗಳಲ್ಲಿ ಭದ್ರತಾ ಸಿಬ್ಬಂದಿಯವರಿಗೆ ಅರಮನೆ ಮಂಡಳಿಯ ಡಿ.ಡಿ ರವರು ಅನುಮತಿ ನೀಡಿರುತ್ತಾರೆ ಎಂದು ತಿಳಿಸಿ ಚಿತ್ರೀಕರಣ ನಡೆಸಿರುವುದು, ಇಲಾಖಾ ವಿಚಾರಣೆ ವೇಳೆ ಅರಮನೆ ಭದ್ರತಾ ಸಿಬ್ಬಂದಿಯವರು ಮತ್ತು ಫೋಟೋಗ್ರಾಫರ್ ಶ್ರೀ.ವೆಂಕಟರಮಣ @ ವೆಂಕಿ ಮತ್ತು ಶ್ರೀ.ಬಿ.ಎನ್.ಆದಿತ್ಯ ಹಾಗೂ ಕರ್ತವ್ಯದಲ್ಲಿದ್ದ ಸಿಬ್ಬಂದಿಯವರು ನೀಡಿದ ಹೇಳಿಕೆಯಿಂದ ತಿಳಿದು ಬಂದಿರುತ್ತದೆ. ಆದ್ದರಿಂದ ಯಾವುದೇ ಅನುಮತಿ ಇಲ್ಲದಿದ್ದರೂ, ಅರಮನೆಯ ಒಳಗೆ ಶ್ರೀ.ಬಿ.ಎನ್.ಆದಿತ್ಯ ಮತ್ತು ನವ್ಯತಾ ರವರ ಪ್ರಿ–ವೆಡ್ಡಿಂಗ್ ಫೋಟೋ ಶೂಟ್ ಮಾಡಲು ಅನುವು ಮಾಡಿಕೊಟ್ಟ, ಅರಮನೆ ಮಂಡಳಿ ಉಪನಿರ್ದೇಶಕರಾದ ಶ್ರೀ.ಟಿ.ಎಸ್.ಸುಬ್ರಹ್ಮಣ್ಯ, ಅರಮನೆ ಕ್ಯೂರೇಟರ್ ಶ್ರೀಮತಿ.ಸಬೀಹ ಬೇಗಂ ಮತ್ತು ಅರಮನೆ ಮಂಡಳಿ ಹೊರಗುತ್ತಿಗೆ ಡಿ–ಗ್ರೂಪ್ ನೌಕರರಾದ ಶ್ರೀ.ಮೋಹನ್

ಹಾಗೂ ಶ್ರೀ.ಯುವರಾಜ್ ರವರ ವಿರುದ್ಧ ಇಲಾಖಾ ಶಿಸ್ತಿನ ಕ್ರಮ ಜರುಗಿಸ ಬೇಕೆಂದು ಕೋರಲಾಗಿದೆ.

ಇದರಿಂದ ಅರಮನೆ ಮಂಡಳಿಯ ಸಿಬ್ಬಂದಿ ಮತ್ತು ಅರಮನೆ ಭದ್ರತಾ ಸಿಬ್ಬಂದಿಯವರಿಗೆ ತಿಳಿಯದಂತೆ, ಇಂಥಹ ಕೃತ್ಯ ಜರುಗಲು ಸಾಧ್ಯವಿಲ್ಲ ಎಂಬುದು ಕಂಡು ಬರುತ್ತದೆ ಹಾಗೂ ಇವರುಗಳ ಸಹಯೋಗದೊಂದಿಗೆ ಈ ಕೃತ್ಯ ಜರುಗಿರಬಹುದೆಂದು ಕಂಡು ಬರುತ್ತದೆ.

ಆರ್‌ಪಿಐ ಶ್ರೀ.ಚಂದ್ರಶೇಖರ್.ಹೆಚ್.ಎಂ ರವರಿಗೆ ಅರಮನೆಯಲ್ಲಿ ಚಿತ್ರೀಕರಣ ನಡೆಸಲು ಬಂದಿದ್ದಾರೆಂದು ಅರಮನೆಯಲ್ಲಿ ಭದ್ರತಾ ಪಡೆಯಲ್ಲಿ ಕರ್ತವ್ಯ ನಿರ್ವಹಣಾಧಿಕಾರಿಯಾದ ಎಹೆಚ್‌ಸಿ 179 ಶ್ರೀ.ನಿಂಗಪ್ಪ ಮತ್ತು ಎಪಿಸಿ 515 ಶ್ರೀ.ಚತುರೇಂದ್ರ ರಾಜು ರವರು ತಿಳಿಸಿ, ಶ್ರೀ.ಬಿ.ಎನ್.ಆದಿತ್ಯ ಮತ್ತು ನವ್ಯತಾ ಹಾಗೂ ಕ್ಯಾಮೆರಾಮೆನ್ ಅನ್ನು ಆರ್‌ಪಿಐ ಶ್ರೀ.ಚಂದ್ರಶೇಖರ.ಹೆಚ್.ಎಂ ರವರ ಕಛೇರಿಗೆ ಹಾಜರುಪಡಿಸಿದ್ದರೂ ಸಹ ಅರಮನೆಯೊಳಗೆ ಚಿತ್ರೀಕರಣ ಮಾಡಲು ಅನುಮತಿ ಇಲ್ಲವೆಂದು ತಿಳಿಸುವ ಬದಲು, ಅವರನ್ನು ಆರ್‌ಪಿಐ ಶ್ರೀ.ಚಂದ್ರಶೇಖರ.ಹೆಚ್.ಎಂ ರವರು ವಿಚಾರ ಮಾಡಿ, ಇವರನ್ನು ಕ್ಯೂರೇಟರ್ ಮೇಡಂ ಬಳಿ ಬಿಡಿ ಎಂದು ತಿಳಿಸುವ ಮೂಲಕ ಒಬ್ಬ ಜವಾಬ್ದಾರಿಯುತ ಅಧಿಕಾರಿಯಾಗಿದ್ದರೂ, ಚಿತ್ರೀಕರಣ ಮಾಡುವುದನ್ನು ತಡೆಯುವ ಬದಲು ಡಿ.ಡಿ ರವರು ಅನುಮತಿ ನೀಡಿದ್ದರೆ, ಒಳಗೆ ಕಳುಹಿಸು ಎಂದು ನುಡಿದಿರುವುದು ಎಹೆಚ್‌ಸಿ 179 ಶ್ರೀ.ನಿಂಗಪ್ಪ ಮತ್ತು ಎಪಿಸಿ 515 ಶ್ರೀ.ಚತುರೇಂದ್ರ ರಾಜು ರವರ ಹೇಳಿಕೆಯಿಂದ ದೃಢಪಟ್ಟಿರುತ್ತದೆ. ಆರ್‌ಪಿಐ ಶ್ರೀ.ಚಂದ್ರಶೇಖರ.ಹೆಚ್.ಎಂ ರವರು ಅರಮನೆ ಭದ್ರತೆಯಲ್ಲಿ ಒಬ್ಬ ಜವಾಬ್ದಾರಿಯುತ ಅಧಿಕಾರಿಯಾಗಿದ್ದರೂ ಸಹ ಅವರು ಕರ್ತವ್ಯದಲ್ಲಿ ತೋರಿರುವ ಅತೀವವಾದ ನಿರ್ಲಕ್ಷ್ಯತೆ, ಕರ್ತವ್ಯ ಲೋಪ ಮತ್ತು ಬೇಜವಾಬ್ದಾರಿತನವನ್ನು ಪ್ರದರ್ಶಿಸಿರುವುದು ಕಂಡು ಬಂದಿರುತ್ತದೆ.

ಮೈಸೂರು ಅರಮನೆಯ ಸಂಪೂರ್ಣ ಉಸ್ತುವಾರಿ ಅರಮನೆ ಮಂಡಳಿಯ ನಿರ್ದೇಶಕರದ್ದಾಗಿದ್ದು, ಈ ಹಿಂದಿನ ಅರಮನೆ ಮಂಡಳಿಯ ನಿರ್ದೇಶಕರಾದ ಶ್ರೀಮತಿ.ಬಿ.ಜಿ.ಇಂದಿರಮ್ಮ ರವರು ಅರಮನೆ ಮಂಡಳಿಯ ನೌಕರರು ಹಾಗೂ ಕಛೇರಿ ಸಿಬ್ಬಂದಿಯವರ ಮೇಲೆ ಹಿಡಿತ ಸಾಧಿಸುವಲ್ಲಿ ವಿಫಲರಾಗಿದ್ದು, ದಿ:25/01/16ರಂದು ಇವರು ಕಛೇರಿಯಲ್ಲಿ ಹಾಜರಿದ್ದರೂ ಸಹ ಫೋಟೋ ಶೂಟ್ ಘಟನೆ ನಡೆದಿದ್ದು, ಈ ಘಟನೆ ಬಗ್ಗೆ ಮಾಹಿತಿಯಿಲ್ಲ ಎಂದು ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ನಿರ್ದೇಶಕರಾದ ಶ್ರೀಮತಿ.ಬಿ.ಜಿ.ಇಂದಿರಮ್ಮ ರವರು ಅರಮನೆ ಮಂಡಳಿಯ ನೌಕರರು ಹಾಗೂ ಕಛೇರಿ ಸಿಬ್ಬಂದಿಯವರ ಮೇಲೆ ಹಿಡಿತ ಸಾಧಿಸುವಲ್ಲಿ ಸಂಪೂರ್ಣ ವಿಫಲರಾಗಿರುವುದು ಕಂಡು ಬಂದಿರುತ್ತದೆ.

XXXXXXXXXXXXXXXXXXXXXXXXXXXXXXXXXXX

ಡಾ॥ಹೆಚ್.ಟಿ.ಶೇಖರ್, ಉಪ ಪೊಲೀಸ್ ಆಯುಕ್ತರು ಕಾನೂನು ಮತ್ತು ಸುವ್ಯವಸ್ಥೆ, ಮೈಸೂರು ನಗರ ರವರ ವರದಿಯಂತೆ ಅರಮನೆಯಲ್ಲಿ ನಡೆಸಲಾಗಿರುವ ಫೋಟೋ ಶೂಟ್ ಮತ್ತಿ ಚಿತ್ರೀಕರಣದ ಸಂಬಂಧವಾಗಿ, ಅರಮನೆ ಮಂಡಳಿ ಹಾಗೂ ಅರಮನೆ ಭದ್ರತಾ ಸಿಬ್ಬಂದಿಗಳು ಕರ್ತವ್ಯ ಲೋಪ ಎಸಗಿರುವುದು ದೃಢಪಟ್ಟಿದ್ದು, ಅದರಂತೆ ಕರ್ತವ್ಯದಲ್ಲಿ ಲೋಪವನ್ನು ಎಸಗಿರುವ ಅರಮನೆ ಮಂಡಳಿಯ ನಿರ್ದೇಶಕರಾದ ಶ್ರೀಮತಿ.ಬಿ.ಜಿ.ಇಂದಿರಮ್ಮ,

mys/2929/16



ಉಪ ನಿರ್ದೇಶಕರಾದ ಶ್ರೀ.ಟಿ.ಎಸ್.ಸುಬ್ರಮಣ್ಯ, ಕ್ಯೂರೇಟರ್ ಆದ ಶ್ರೀಮತಿ.ಸಬೀಹಾ ಬೇಗಂ, ಹೊರಗುತ್ತಿಗೆ ಡಿ–ಗ್ರೂಪ್ ನೌಕರರಾದ ಶ್ರೀ.ಮೋಹನ್ ಮತ್ತು ಶ್ರೀ.ಯುವರಾಜ್ ರವರುಗಳ ಮೇಲೆ ತಮ್ಮ ವತಿಯಿಂದ ಸೂಕ್ತ ಶಿಸ್ತಿನ ಕ್ರಮವನ್ನು ಕೈಗೊಳ್ಳಬೇಕೆಂದು ಉಳಿದಂತೆ ಅರಮನೆ ಭದ್ರತಾ ಪಡೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಮೇಲ್ಕಂಡ ಪೋಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳ ಮೇಲೆ ಸೂಕ್ತ ಶಿಸ್ತಿನ ಕ್ರಮವನ್ನು ಕೈಗೊಳ್ಳಲಾಗುವುದು."

3) ದಿನಾಂಕ:12/02/2015ರಂದು ನಡೆದ ಮೈಸೂರು ಅರಮನೆ ಮಂಡಳಿಯ ಸಭೆಯಲ್ಲಿ, ಅರಮನೆಯ ಒಳಾವರಣಕ್ಕೆ ಕ್ಯಾಮೆರಾಗಳನ್ನು ತೆಗೆದುಕೊಂಡು ಹೋಗುವ ಸಂಬಂಧ ಚರ್ಚೆ ನಡೆದಿದ್ದು, ಅರಮನೆಯೊಳಗಡೆ ಕ್ಯಾಮೆರಾವನ್ನು ತೆಗೆದುಕೊಂಡು ಹೋಗಲು ಹಾಗೂ ಫ್ಲ್ಯಾಷ್ ಉಪಯೋಗಿಸದೇ ಫೋಟೋ ತೆಗೆಯುವ ಬಗ್ಗೆ ಮಾತ್ರ ಅನುಮತಿ ನೀಡಿರುವುದು ಕಂಡು ಬಂದಿದೆ;

4) ನಿವೃತ್ತ ಐ.ಎ.ಎಸ್ ಅಧಿಕಾರಿ ಶ್ರೀ.ನಂದಕುಮಾರ್ ರವರ ಪುತ್ರ ಶ್ರೀ.ಬಿ.ಎನ್.ಆದಿತ್ಯ ಮತ್ತು ಅವರ ಭಾವಿ ಪತ್ನಿ ಶ್ರೀಮತಿ.ನವ್ಯತಾ ರವರ ಪ್ರಿ–ವೆಡ್ಡಿಂಗ್ ಫೋಟೋ ಶೂಟ್ ಮತ್ತು ವಿಡಿಯೋ ಚಿತ್ರೀಕರಣ ಮೈಸೂರು ಅರಮನೆ ಒಳಾಂಗಣದಲ್ಲಿ ಚಿತ್ರೀಕರಿಸಿದ ಬಗ್ಗೆ ಪತ್ರಿಕಾ ವರದಿಯ ಪ್ರತಿಗಳಿವೆ. ಸದರಿ ಘಟನೆ ದಿ:25/01/16ರಂದು ನಡೆದಿದೆಯೆಂದು ಕಡತದಲ್ಲಿರುವ ದಾಖಲೆಗಳಲ್ಲಿ ಕಂಡು ಬಂದಿದೆ (ಪತ್ರಿಕಾ ವರದಿಗಳನ್ವಯ ದಿ:28/01/16);

5) ಸದರಿ ಪ್ರಕರಣ ಮಾತ್ರವಲ್ಲದೇ, ಅರಮನೆಯ ಒಳಾವರಣದಲ್ಲಿ ಬೇರೆ ಬೇರೆ ದಿನಾಂಕಗಳಂದೂ ಫೋಟೋ ಶೂಟ್ ನಡೆದಿವೆಯೆಂದು ತನಿಖಾಧಿಕಾರಿಗಳು ಸಲ್ಲಿಸಿದ ದಿನಾಂಕ:05/01/18ರ ವರದಿಯೊಂದಿಗಿನ ದಿ:18/06/16ರ ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ವರದಿಯಾಗಿದೆ;

6) ಮೈಸೂರು ಅರಮನೆಯು ಹೆಚ್ಚಿನ ಭದ್ರತಾ ಪ್ರವಾಸಿ ತಾಣವಾಗಿದ್ದು, ಅರಮನೆಯ ಒಳ ಮತ್ತು ಹೊರ ಆವರಣದ ಸಂರಕ್ಷಣೆಯ ಜವಾಬ್ದಾರಿ ಅರಮನೆಯ ಆಡಳಿತ ಮಂಡಳಿ ಮತ್ತು ಅರಮನೆಯ ಭದ್ರತಾ ಪಡೆಯದ್ದಾಗಿದೆ. ಅರಮನೆ ಮಂಡಳಿಯ ನಿಯಮಗಳನ್ನು ಉಲ್ಲಂಘಿಸಿ, ಪ್ರಭಾವಿ ವ್ಯಕ್ತಿಗಳಿಗೆ ಮತ್ತು ಅವರ ಸಂಬಂಧಿಗಳಿಗೆ ಅನಧಿಕೃತವಾಗಿ ಫೋಟೋ ಶೂಟ್ ಮತ್ತು ವಿಡಿಯೋ ಚಿತ್ರೀಕರಣ ಮಾಡಲು ಅವಕಾಶ ನೀಡಿರುವುದು ದಾಖಲೆಗಳಲ್ಲಿ ಕಂಡು ಬಂದಿದೆ;

7) ದಿನಾಂಕ:25/01/2016ರಂದು ಮೈಸೂರು ಅರಮನೆ ಆವರಣದಲ್ಲಿ ನಡೆದಿದೆಯೆನ್ನಲಾದ ಶ್ರೀ.ಬಿ.ಎನ್.ಆದಿತ್ಯ ಮತ್ತು ಶ್ರೀಮತಿ.ನವ್ಯತಾ ರವರ ಪ್ರಿ–ವೆಡ್ಡಿಂಗ್ ಫೋಟೋ ಶೂಟ್ ಮತ್ತು ಚಿತ್ರೀಕರಣದಲ್ಲಿ ಫ್ಲ್ಯಾಷ್ ಇರುವ ಕ್ಯಾಮೆರಾ ಮತ್ತು ವಿಡಿಯೋ ಕ್ಯಾಮೆರಾವನ್ನು ಬಳಸಿರುವುದು ಕಂಡು ಬಂದಿದ್ದು, ಸದರಿ ಪ್ರಕರಣದಲ್ಲಿ ಅರಮನೆಯ ಭದ್ರತಾ ಪಡೆಯ ವೈಫಲ್ಯ ಮಾತ್ರವಲ್ಲದೇ, ಅರಮನೆ ಮಂಡಳಿಯ ಕರ್ತವ್ಯ ಲೋಪವು ಕಂಡು ಬಂದಿದೆ. ಅರಮನೆಯೊಳಗೆ ಅಥವಾ ಹೊರಗೆ ಚಿತ್ರೀಕರಣ ಮಾಡಲು ಸರ್ಕಾರದಿಂದ ಅನುಮತಿ ಪಡೆಯಬೇಕಾಗಿರುವುದು ಕಡ್ಡಾಯವಾಗಿದೆ;

8) ಮೈಸೂರು ನಗರ ಪೋಲೀಸ್ ಆಯುಕ್ತರ ದಿ:28/07/2016ರ ವರದಿಯನ್ವಯ ಸದರಿ ಲೋಪಕ್ಕೆ ಅರಮನೆ ಮಂಡಳಿಯ ಉಪ ನಿರ್ದೇಶಕರಾದ ಎದುರುದಾರರೂ ಜವಾಬ್ದಾರರಾಗಿದ್ದಾರೆ;

9) ಸದರಿ ದೂರಿನ ಘಟನೆಗೆ ಸಂಬಂಧಿಸಿದಂತೆ, ಎದುರುದಾರರು ಮತ್ತು ಇತರೆ ಕೆಲವು ಅಧಿಕಾರಿಗಳು \ ಸಿಬ್ಬಂದಿಗಳ ಕರ್ತವ್ಯ ಲೋಪ ಕಂಡು ಬಂದಿರುವುದರಿಂದ, ಸದರಿಯವರ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಲು ಅಂದಿನ ಮೈಸೂರು ಜಿಲ್ಲಾಧಿಕಾರಿಗಳು ಸರ್ಕಾರದ ಮುಖ್ಯ ಕಾರ್ಯದರ್ಶಿರವರಿಗೆ ವರದಿಯನ್ನು ಕಳುಹಿಸಿದ್ದಾರೆಂದು (ಕಡತ ಸಂಖ್ಯೆ:ಸಿಆಸುಇ 63 ಸೇಅವಿ 2016) ದೂರಿನಲ್ಲಿ ಹೇಳಿದೆ. ಸದರಿ ವರದಿಯಲ್ಲಿ ಯಾವುದೇ ಕ್ರಮ ಕೈಗೊಂಡಿಲ್ಲ;

10) ಎದುರುದಾರರು ಮೈಸೂರು ಅರಮನೆ ಮಂಡಳಿಯ ಉಪ ನಿರ್ದೇಶಕರಾಗಿದ್ದು, ಸದರಿಯವರ ಆದೇಶದಂತೆ ಸದರಿ ಫೋಟೋ ಶೂಟ್ ಮತ್ತು ವಿಡಿಯೋ ಚಿತ್ರೀಕರಣ ನಡೆದಿದೆಯೆಂದು ವಿಚಾರಣಾಧಿಕಾರಿಯವರ ವರದಿಯಲ್ಲಿ ಕಂಡು ಬಂದಿದೆ. ಸದರಿಯವರು ಘಟನೆ ನಡೆದ ದಿನ ಕೇಂದ್ರ ಸ್ಥಾನದಲ್ಲಿ ಇರಲಿಲ್ಲ ಎಂದು ಪ್ರತಿಪಾದಿಸುತ್ತಿದ್ದು, ಕೇಂದ್ರ ಸ್ಥಾನದಲ್ಲಿ ಇಲ್ಲದ ಮಾತ್ರಕ್ಕೆ ಅವರ ಆದೇಶ \ ಅನುಮತಿ ಇಲ್ಲದೇ ಫೋಟೋ ಶೂಟ್ ನಡೆದಿದೆ ಎಂದು ಹೇಳಲಾಗುವುದಿಲ್ಲ. ಮುಂದುವರೆದು, ಸದರಿಯವರು ಫೋಟೋ ಶೂಟ್ ನಡೆದ ದಿನಾಂಕದಂದು ಕೇಂದ್ರ ಬಿಟ್ಟಿರಲು ಪೂರ್ವಾನುಮತಿಯನ್ನು ಪಡೆದ ದಾಖಲೆಗಳಿಲ್ಲ. ಕಾರಣ, ಸದರಿಯವರ ದುರ್ನಡತೆ ಮೇಲ್ನೋಟಕ್ಕೆ ಸಾಬೀತಾಗಿದೆ.

6. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು, ವರದಿಗಳು ಮತ್ತು ಆಕ್ಷೇಪಣೆಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

7. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

8. ಅದಲ್ಲದೆ ಎದುರದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, ಹಾಗೂ

MYS/2929/16



ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ಅಡಿ ಈ ಸಂಸ್ಥೆಗೆ ವಹಿಸ ಬೇಕೆಂದು ಕೋರಿದೆ.

9. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

N. Anand 1/7

**(ನ್ಯಾಯಾಮೂರ್ತಿ ಎನ್.ಆನಂದ)**
**ಉಪಲೋಕಾಯುಕ್ತ,**
**ಕರ್ನಾಟಕ ರಾಜ್ಯ.**

01/07